/

ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/16/2016-17. ದಿನಾಂಕ:25-07-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಗೌಡ್ರು ಶಾರದಮ್ಮ ಗಂಡ ಲೇಟ್ ಗೌಡ್ರು ಬಸವನಗೌಡ<br>2)ಗೌಡ್ರು ರೇವಮ್ಮ ಗಂಡ ಲೇಟ್ ಗೌಡ್ರು ಕೊಟ್ರಬಸಪ್ಪ<br>ನಾಗಲಾಪುರ ಗ್ರಾಮ ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 443ಬಿಪೈಕಿ. 444ಎಪೈಕಿ. ವಿಸ್ತೀರ್ಣ 7-42. 1-07. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 443ಬಿಪೈಕಿ. 444ಎಪೈಕಿ. ವಿಸ್ತೀರ್ಣ 7-42. 1-07. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ನಾಗಲಾಪುರ ಗ್ರಾಮದ ಗೌಡ್ರು ರೇವಮ್ಮ ಗಂಡ ಲೇಟ್ ಗೌಡ್ರು ಕೊಟ್ರಬಸಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಚೌಡಾಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 27-02-2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಪಟ್ಟದಾರನ ವಾರಸುದಾರರು ನಮೂನೆ-21ಕ್ಕೆ ಸಹಿ ಮಾಡಿಲ್ಲದ ಕಾರಣ ಹಾಗೂ ಅರ್ಜಿದಾರರು ಮರಣ ದೃಡಿಕರಣ ಪತ್ರ ಲಗತ್ತಿಸಿಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 58/2015-16. ದಿನಾಂಕ 29-03-2016. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 28-06-2016 ರಿಂದ 25-07-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಚೌಡಾಪುರ ಗ್ರಾಮದ ಸನಂ 443ಬಿಪೈಕಿ. 444ಎಪೈಕಿ. ವಿಸ್ತೀರ್ಣ 7-42. 1-07. ಎಕ್ರೆ ಜಮೀನುಗಳು ನನ್ನ ಗಂಡನಾದ ಗೌಡ್ರು ಕೊಟ್ರಬಸಪ್ಪ ತಂದೆ ಸಿದ್ದಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 08-07-1970 ರಂದು ಹಾಗೂ ನನ್ನ ಗಂಡನ ಮೊದಲನೆ ಹೆಂಡತಿಯಾದ ಗೌಡ್ರು ಚನ್ನಬಸಮ್ಮ ಗಂಡ ಕೊಟ್ರಬಸಪ್ಪ ಇವರು 20-10-1960 ರಂದು ಹಾಗೂ ಇವರ ಏಕೈಕ ಮಗನಾದ ಬಸವನಗೌಡ ತಂದೆ ಲೇಟ್ ಕೊಟ್ರಬಸಪ್ಪ ಇವರು ದಿನಾಂಕ 27-11-2014 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನನ್ನ ಗಂಡನ ಹೆಸರನ್ನು ಕಡಿಮೆ ಮಾಡಿ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಖಾತಾ ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಅರ್ಜಿದಾರರ ಕೋರಿಕೆಯನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 443ಬಿಪೈಕಿ. 444ಎಪೈಕಿ. ವಿಸ್ತೀರ್ಣ 7–42. 1–07. ಎಕ್ರೆ ಜಮೀನುಗಳನ್ನು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಗೌಡ್ರು ಶಾರದಮ್ಮ ಗಂಡ ಲೇಟ್ ಗೌಡ್ರು ಬಸವನಗೌಡ. ಗೌಡ್ರು ರೇವಮ್ಮ ಗಂಡ ಲೇಟ್ ಗೌಡ್ರು ಕೊಟ್ರಬಸಪ್ಪ. ನಾಗಲಾಪುರ ಗ್ರಾಮ ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 25–07–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ
[illegible]

ಇದರ ಪ್ರತಿಯನ್ನು:

1) ಅರ್ಜಿದಾರರಾದ ಗೌಡ್ರು ಶಾರದಮ್ಮ ಗಂಡ ಲೇಟ್ ಗೌಡ್ರು ಬಸವನಗೌಡ. ಗೌಡ್ರು ರೇವಮ್ಮ ಗಂಡ ಲೇಟ್ ಗೌಡ್ರು ಕೊಟ್ರಬಸಪ್ಪ ನಾಗಲಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಹೊಸಹಳ್ಳಿ ಇವರಿಗೆ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.